ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./34/2021-22 ದಿನಾಂಕ: 16.03.2023

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನಾ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2015 ರ ಕಲಂ 17(2ಎ) ರಡಿಯಲ್ಲಿ)

**ವಿಷಯ:** ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಿನ್ನಾಗರ ಗ್ರಾಮದ ಸ.ನಂ. 89/2 ರಲ್ಲಿನ 20 ಗುಂಟೆ, ಸ.ನಂ. 89/4 ರಲ್ಲಿನ 39 ಗುಂಟೆ, ಸ.ನಂ. 89/9 ರಲ್ಲಿನ 20 ಗುಂಟೆ, ಸ.ನಂ. 89/10 ರಲ್ಲಿನ 20 ಗುಂಟೆ, ಸ.ನಂ. 89/11 ರಲ್ಲಿನ 01 ಎಕರೆ, ಸ.ನಂ. 89/13 ರಲ್ಲಿನ 01 ಎಕರೆ, ಸ.ನಂ. 89/14 ರಲ್ಲಿನ 01 ಎಕರೆ, ಸ.ನಂ. 89/15 ರಲ್ಲಿನ 20 ಗುಂಟೆ ಸ.ನಂ. 90/1 ರಲ್ಲಿನ 02 ಎಕರೆ 10 ಗುಂಟೆ, ಸ.ನಂ. 90/4 ರಲ್ಲಿನ 01 ಎಕರೆ, ಸ.ನಂ. 90/6 ರಲ್ಲಿನ 01 ಎಕರೆ, ಸ.ನಂ. 90/8 ರಲ್ಲಿನ 01 ಎಕರೆ, ಸ.ನಂ. 90/10 ರಲ್ಲಿನ 01 ಎಕರೆ, ಸ.ನಂ. 90/11 ರಲ್ಲಿನ 01 ಎಕರೆ, ಸ.ನಂ. 90/12 ರಲ್ಲಿನ 35 ಗುಂಟೆ, ಸ.ನಂ. 90/13 ರಲ್ಲಿನ 01 ಎಕರೆ, ಸ.ನಂ. 90/14 ರಲ್ಲಿನ 02 ಎಕರೆ 11 ಗುಂಟೆ, ಸ. ನಂ. 90/15 ರಲ್ಲಿನ 01 ಎಕರೆ 11 ಗುಂಟೆ, ಸ. ನಂ. 90/16 ರಲ್ಲಿನ 02 ಎಕರೆ 11 ಗುಂಟೆ, ಸ.ನಂ. 90/17 ರಲ್ಲಿನ 20 ಗುಂಟೆ, ಸ.ನಂ. 90/18 ರಲ್ಲಿನ 20 ಗುಂಟೆ, ಸ.ನಂ. 90/19 ರಲ್ಲಿನ 20 ಗುಂಟೆ, ಸ.ನಂ. 90/20 ರಲ್ಲಿನ 20 ಗುಂಟೆ, ಸ.ನಂ. 90/21 ರಲ್ಲಿನ 01 ಎಕರೆ, ಸ.ನಂ. 90/22 ರಲ್ಲಿನ 10 ಗುಂಟೆ, ಸ.ನಂ. 93/5 ರಲ್ಲಿನ 37 ಗುಂಟೆ ಮತ್ತು ಸ.ನಂ. 97/1ಎ ರಲ್ಲಿನ 03 ಎಕರೆ 12 ಗುಂಟೆ **ಒಟ್ಟು 28 ಎಕರೆ 16 ಗುಂಟೆ (02 ಗುಂಟೆ 'ಎ' ಖರಾಬು ಸೇರಿ ಮತ್ತು 07 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ)** ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:**

1. ಅರ್ಜಿದಾರರ ಮನವಿ ಪತ್ರ ದಿನಾಂಕ: 08.06.2022.
2. ದಿನಾಂಕ: 22.06.2022 ರಂದು ನಡೆದ ಪ್ರಾಧಿಕಾರದ 92 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 11 ರ ನಿರ್ಣಯ.
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 14.07.2022.
4. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಬಗ್ಗೆ ದಿನಾಂಕ: 27.07.2022 ರ ಮನವಿಯೊಂದಿಗೆ, ಡಿ.ಡಿ ನಂ. 154252, ದಿನಾಂಕ: 27.07.2022, ರೂ. 1,10,44,700/-, ಕರ್ನಾಟಕ ಬ್ಯಾಂಕ್ ಲಿ, ಇಂದಿರಾನಗರ, ಬೆಂಗಳೂರು ಶಾಖೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ಹಾಗೂ ಉಪನೋಂದಣಾಧಿಕಾರಿಗಳು, ಹೊಸಕೋಟೆ ಇವರುಗಳಿಗೆ ಪರಿತ್ಯಜನಾ ಪತ್ರವನ್ನು ನೋಂದಾಯಿಸಲು ತಿಳಿಸಲಾದ ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: 09.02.2023.
6. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ಇವರ ಪತ್ರ ಸಂಖ್ಯೆ: ದೊ.ಗ್ರಾ.ಪಂ/149/2022-23, ದಿನಾಂಕ: 14.03.2023.
7. ಅರ್ಜಿದಾರರ ಮನವಿ ಪತ್ರ ದಿನಾಂಕ: 14.03.2023.
8. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2015 ರ ಕಲಂ 17(2ಎ) ರಲ್ಲಿನ ಅವಕಾಶದನ್ವಯ.

**ಪ್ರಸ್ತಾವನೆ:–**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಅರ್ಜಿದಾರರು ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಿನ್ನಾಗರ ಗ್ರಾಮದ ಸ.ನಂ. 89/2 ರಲ್ಲಿನ 20 ಗುಂಟೆ, ಸ.ನಂ. 89/4 ರಲ್ಲಿನ 39 ಗುಂಟೆ, ಸ.ನಂ. 89/9 ರಲ್ಲಿನ 20 ಗುಂಟೆ, ಸ.ನಂ. 89/10 ರಲ್ಲಿನ 20 ಗುಂಟೆ, ಸ.ನಂ. 89/11 ರಲ್ಲಿನ 01 ಎಕರೆ, ಸ.ನಂ. 89/13 ರಲ್ಲಿನ 01 ಎಕರೆ, ಸ.ನಂ. 89/14 ರಲ್ಲಿನ 01 ಎಕರೆ, ಸ.ನಂ. 89/15 ರಲ್ಲಿನ 20 ಗುಂಟೆ ಸ.ನಂ. 90/1 ರಲ್ಲಿನ 02 ಎಕರೆ 10 ಗುಂಟೆ, ಸ.ನಂ. 90/4 ರಲ್ಲಿನ 01 ಎಕರೆ, ಸ.ನಂ. 90/6 ರಲ್ಲಿನ 01 ಎಕರೆ, ಸ.ನಂ. 90/8 ರಲ್ಲಿನ 01 ಎಕರೆ, ಸ.ನಂ. 90/10 ರಲ್ಲಿನ 01 ಎಕರೆ, ಸ.ನಂ. 90/11 ರಲ್ಲಿನ 01 ಎಕರೆ, ಸ.ನಂ. 90/12 ರಲ್ಲಿನ 35 ಗುಂಟೆ, ಸ.ನಂ. 90/13 ರಲ್ಲಿನ 01 ಎಕರೆ, ಸ.ನಂ. 90/14 ರಲ್ಲಿನ 02 ಎಕರೆ 11 ಗುಂಟೆ, ಸ. ನಂ. 90/15 ರಲ್ಲಿನ 01 ಎಕರೆ 11 ಗುಂಟೆ, ಸ. ನಂ. 90/16 ರಲ್ಲಿನ 02 ಎಕರೆ 11 ಗುಂಟೆ, ಸ.ನಂ. 90/17 ರಲ್ಲಿನ 20 ಗುಂಟೆ, ಸ.ನಂ. 90/18 ರಲ್ಲಿನ 20 ಗುಂಟೆ, ಸ.ನಂ. 90/19 ರಲ್ಲಿನ 20 ಗುಂಟೆ, ಸ.ನಂ. 90/20 ರಲ್ಲಿನ 20 ಗುಂಟೆ, ಸ.ನಂ. 90/21 ರಲ್ಲಿನ 01 ಎಕರೆ, ಸ.ನಂ. 90/22 ರಲ್ಲಿನ 10 ಗುಂಟೆ, ಸ.ನಂ. 93/5 ರಲ್ಲಿನ 37 ಗುಂಟೆ ಮತ್ತು ಸ.ನಂ. 97/1ಎ ರಲ್ಲಿನ 03 ಎಕರೆ 12 ಗುಂಟೆ **ಒಟ್ಟು 28 ಎಕರೆ 16 ಗುಂಟೆ (02 ಗುಂಟೆ 'ಎ' ಖರಾಬು ಸೇರಿ ಮತ್ತು 07 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ)** ವಿಸ್ತೀರ್ಣದ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ಜಮೀನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ವಸತಿ, ಉದ್ಯಾನವನ ಮತ್ತು ಬಯಲು ಜಾಗ ಹಾಗೂ ಉದ್ದೇಶಿತ 12 ಮತ್ತು 24 ಮೀ. ಅಗಲದ ರಸ್ತೆಗಳನ್ನು ಹಾಗೂ ಹಾಲಿ ರಸ್ತೆಯನ್ನು 18 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಅದರಂತೆ, ಪ್ರಸ್ತಾಪಿತ ಜಮೀನುಗಳನ್ನು ಜಿಲ್ಲಾಧಿಕಾರಿಗಳು ವಸತಿ ಹಾಗೂ ಉದ್ಯಾನವನ ಮತ್ತು ಬಯಲು ಜಾಗ ಉದ್ದೇಶಕ್ಕೆ ಈ ಕೆಳಕಂಡಂತೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

| ಕ್ರ. ಸಂ. | ಸರ್ವೆ ನಂ. | ವಿಸ್ತೀರ್ಣ ಎ–ಗುಂ | 'ಬಿ'ಖರಾಬು (ಗುಂ) | ಭೂ ಪರಿವರ್ತನಾ ಆದೇಶದ ಸಂಖ್ಯೆ |
|---|---|---|---|---|
| 1 | 89/2 | 00–20 | – | LAND10008376, ದಿನಾಂಕ: 21.02.2019 |
| 2 | 89/9 | 00–20 | – | |
| 3 | 89/10 | 00–20 | – | |
| 4 | 89/11 | 01–00 | – | |
| 5 | 90/1 | 02–10 | – | ಸಂಖ್ಯೆ: 278487, ದಿನಾಂಕ:24.01.2022 |
| 6 | 90/4 | 01–00 | – | ಸಂಖ್ಯೆ: 192450, ದಿನಾಂಕ:09.11.2020 |
| 7 | 90/6 | 01–00 | – | ಸಂಖ್ಯೆ: 196234, ದಿನಾಂಕ: 19.12.2020 |
| 8 | 90/8 | 01–00 | 01 | ಸಂಖ್ಯೆ: 170192, ದಿನಾಂಕ:10.09.2020 |
| 9 | 90/10 | 01–00 | – | ಸಂಖ್ಯೆ: 170193, ದಿನಾಂಕ:10.09.2020 |
| 10 | 90/11 | 01–00 | – | ಸಂಖ್ಯೆ: 190579, ದಿನಾಂಕ: 09.11.2020 |
| 11 | 90/12 | 00–35 | – | LNDC10000906, ದಿನಾಂಕ:29.09.2018 |
| 12 | 90/13 | 01–00 | – | |
| 13 | 90/14 | 02–11 | – | ಸಂಖ್ಯೆ: 146153, ದಿನಾಂಕ: 26.02.2020 |
| 14 | 90/15 | 01–11 | – | ಸಂಖ್ಯೆ: 168821, ದಿನಾಂಕ: 10.09.2020 |
| 15 | 90/16 | 02–11 | – | ಸಂಖ್ಯೆ: 114828, ದಿನಾಂಕ: 03.01.2020 |
| 16 | 90/17 | 00–20 | – | ಸಂಖ್ಯೆ: 192451, ದಿನಾಂಕ: 09.11.2020 |
| 17 | 90/18 | 00–20 | – | ಸಂಖ್ಯೆ: 144040, ದಿನಾಂಕ:26.02.2020 |
| 18 | 90/19 | 00–20 | – | ಸಂಖ್ಯೆ: 144632, ದಿನಾಂಕ: 26.02.2020 |
| 19 | 90/20 | 00–20 | – | ಸಂಖ್ಯೆ: 14622, ದಿನಾಂಕ: 26.02.2020 |
| 20 | 90/21 | 01–00 | – | ಸಂಖ್ಯೆ: 190580, ದಿನಾಂಕ: 09.11.2020 |
| 21 | 90/22 | 00–10 | 04 | ಸಂಖ್ಯೆ: 192449, ದಿನಾಂಕ:09.11.2020 |
| 22 | 97/1ಎ | 03–12 | – | ಸಂಖ್ಯೆ: 5753, ದಿನಾಂಕ: 19.08.2019 |
| 23 | 89/4 | 00–39 | 01 | ಸಂಖ್ಯೆ: 334980, ದಿನಾಂಕ:12.05.2022 |
| 24 | 89/13 | 01–00 | – | ಸಂಖ್ಯೆ: 334981, ದಿನಾಂಕ:12.05.2022 |
| 25 | 89/14 | 01–00 | – | ಸಂಖ್ಯೆ: 334982, ದಿನಾಂಕ:12.05.2022 |

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412
URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

**ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./34/2021–22** **ದಿನಾಂಕ: 16.03.2023**

| | | | | |
|---|---|---|---|---|
| 26 | 89/15 | 00–20 | — | ಸಂಖ್ಯೆ: 334983, ದಿನಾಂಕ: 12.05.2022 |
| 27 | 93/5 ರ ಪೈಕಿ | 00–18 | 01 | ಸಂಖ್ಯೆ: 342822, ದಿನಾಂಕ: 01.06.2022 |
| 28 | | 00–19 | | ಸಂಖ್ಯೆ: 342818, ದಿನಾಂಕ: 01.06.2022 |
| **ಒಟ್ಟು** | | **28–16** | **07** | |

ಉಲ್ಲೇಖ (02) ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ. ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಉಲ್ಲೇಖ (3) ರಲ್ಲಿ ನಿಗದಿತ ಶುಲ್ಕವನ್ನು ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿದ್ದು, ಉಲ್ಲೇಖ (4) ರಲ್ಲಿ ಅರ್ಜಿದಾರರು ನಿಗದಿತ ಶುಲ್ಕ **ರೂ. 1,10,44,700/– ಗಳನ್ನು** ಡಿಡಿ ಮೂಲಕ ಪ್ರಾಧಿಕಾರಕ್ಕೆ ಪಾವತಿಸುತ್ತಾ, ಪ್ರಸ್ತಾಪಿತ ಜಮೀನುಗಳಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

ಅನುಮೋದನೆ ನೀಡುವಂತೆ ಕೋರಿ ಸಲ್ಲಿಸಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿ ವಸತಿಗಾಗಿ 59646.66 ಚ. ಮೀ. (ಶೇ 51.90); ವಾಣಿಜ್ಯಕ್ಕಾಗಿ 3378.34 ಚ.ಮೀ. (ಶೇ. 2.94); ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 11500.00 ಚ. ಮೀ. (ಶೇ 10.00), ನಾಗರೀಕ ಸೌಲಭ್ಯ ನಿವೇಶನ (ಸಿಎ) ಕ್ಕಾಗಿ 5748.00 ಚ.ಮೀ. (ಶೇ. 05.00) ಮತ್ತು ರಸ್ತೆಗಳಿಗಾಗಿ 34656.12 ಚ. ಮೀ. (ಶೇ 30.16) ವಿಸ್ತೀರ್ಣವನ್ನು ನಿಗದಿಪಡಿಸಲಾಗಿದ್ದು, ವಿನ್ಯಾಸದಲ್ಲಿ ಒಟ್ಟು 372 ವಸತಿ ಹಾಗೂ 17 ವಾಣಿಜ್ಯ ನಿವೇಶನಗಳು ಸೇರಿ ಒಟ್ಟು 389 ನಿವೇಶನಗಳನ್ನು ಪ್ರಸ್ತಾಪಿಸಲಾಗಿದೆ. ಕೆ.ಟಿ.ಸಿ.ಪಿ. ತಿದ್ದುಪಡಿ ಕಾಯ್ದೆ, 2015 ರ ಕಲಂ 17(2ಎ) ರಂತೆ ಅಂತಿಮಗೊಳಿಸಲಾದ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿ ಕಾಯ್ದಿರಿಸಲಾದ ಉದ್ಯಾನವನ ಮತ್ತು ಬಯಲು ಜಾಗ ಹಾಗೂ ರಸ್ತೆಗಳಿಗಾಗಿ ಕಾಯ್ದಿರಿಸಿದ ಜಾಗವನ್ನು **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ಇವರಿಗೆ** ಹಾಗೂ ನಾಗರೀಕ ಸೌಲಭ್ಯ ನಿವೇಶನ (ಸಿಎ) ಕ್ಕಾಗಿ ಕಾಯ್ದಿರಿಸಿದ ಪ್ರದೇಶವನ್ನು ಈ ಪ್ರಾಧಿಕಾರಕ್ಕೆ ಮುಕ್ತಟಯಾಗಿ ಪರಿತ್ಯಜನಾ ಪತ್ರದ ಮುಖಾಂತರ ಹಾಗೂ ಪರಿತ್ಯಜನಾ ಪತ್ರವನ್ನು ನೋಂದಾಯಿಸಿಕೊಡಲು ಉಲ್ಲೇಖ (5) ರಲ್ಲಿ ತಿಳಿಸಲಾಗಿತ್ತು.

ಅದರಂತೆ, ಉಲ್ಲೇಖ (6) ರಲ್ಲಿ ಉದ್ಯಾನವನ ಮತ್ತು ಬಯಲು ಜಾಗ ಹಾಗೂ ರಸ್ತೆ ಪ್ರದೇಶಗಳನ್ನು **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು** ಇವರಿಗೆ ಹಾಗೂ ಉಲ್ಲೇಖ (7) ರಲ್ಲಿ ನಾಗರೀಕ ಸೌಲಭ್ಯ ನಿವೇಶನ (ಸಿಎ) ಕ್ಕಾಗಿ ಕಾಯ್ದಿರಿಸಿದ ಪ್ರದೇಶವನ್ನು ಈ ಪ್ರಾಧಿಕಾರಕ್ಕೆ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿದ್ದು, ಅದರ ಮೂಲ / ದೃಢೀಕೃತ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಆದ್ದರಿಂದ, ಉಲ್ಲೇಖ (8) ರ ಕೆಟಿಸಿಪಿ ತಿದ್ದುಪಡಿ ಕಾಯ್ದೆ, 2015 ರ ಕಲಂ 17(2ಎ) ರಡಿಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ ಸಂಖ್ಯೆ: ಹೊ.ಯೋ.ಪ್ರಾ/ಎಲ್.ಎ.ಓ/34/2021–22, ದಿನಾಂಕ : 16.03.2023

ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಚಿನ್ನಾಗರ ಗ್ರಾಮದ ಸ.ನಂ. 89/2 ರಲ್ಲಿನ 20 ಗುಂಟೆ, ಸ.ನಂ. 89/4 ರಲ್ಲಿನ 39 ಗುಂಟೆ, ಸ.ನಂ. 89/9 ರಲ್ಲಿನ 20 ಗುಂಟೆ, ಸ.ನಂ. 89/10 ರಲ್ಲಿನ 20 ಗುಂಟೆ, ಸ.ನಂ. 89/11 ರಲ್ಲಿನ 01 ಎಕರೆ, ಸ.ನಂ. 89/13 ರಲ್ಲಿನ 01 ಎಕರೆ, ಸ.ನಂ. 89/14 ರಲ್ಲಿನ 01 ಎಕರೆ, ಸ.ನಂ. 89/15 ರಲ್ಲಿನ 20 ಗುಂಟೆ ಸ.ನಂ. 90/1 ರಲ್ಲಿನ 02 ಎಕರೆ 10 ಗುಂಟೆ, ಸ.ನಂ. 90/4 ರಲ್ಲಿನ 01 ಎಕರೆ, ಸ.ನಂ. 90/6 ರಲ್ಲಿನ 01 ಎಕರೆ, ಸ.ನಂ. 90/8 ರಲ್ಲಿನ 01 ಎಕರೆ, ಸ.ನಂ. 90/10 ರಲ್ಲಿನ 01 ಎಕರೆ, ಸ.ನಂ. 90/11 ರಲ್ಲಿನ 01 ಎಕರೆ, ಸ.ನಂ. 90/12 ರಲ್ಲಿನ 35 ಗುಂಟೆ, ಸ.ನಂ. 90/13 ರಲ್ಲಿನ 01 ಎಕರೆ, ಸ.ನಂ. 90/14 ರಲ್ಲಿನ 02 ಎಕರೆ 11 ಗುಂಟೆ, ಸ. ನಂ. 90/15 ರಲ್ಲಿನ 01 ಎಕರೆ 11 ಗುಂಟೆ, ಸ. ನಂ. 90/16 ರಲ್ಲಿನ 02 ಎಕರೆ 11 ಗುಂಟೆ, ಸ.ನಂ. 90/17 ರಲ್ಲಿನ 20 ಗುಂಟೆ, ಸ.ನಂ. 90/18 ರಲ್ಲಿನ 20 ಗುಂಟೆ, ಸ.ನಂ. 90/19 ರಲ್ಲಿನ 20 ಗುಂಟೆ, ಸ.ನಂ. 90/20 ರಲ್ಲಿನ 20 ಗುಂಟೆ,

ಸ.ನಂ. 90/21 ರಲ್ಲಿನ 01 ಎಕರೆ, ಸ.ನಂ. 90/22 ರಲ್ಲಿನ 10 ಗುಂಟೆ, ಸ.ನಂ. 93/5 ರಲ್ಲಿನ 37 ಗುಂಟೆ ಮತ್ತು ಸ.ನಂ. 97/1ಎ ರಲ್ಲಿನ 03 ಎಕರೆ 12 ಗುಂಟೆ **ಒಟ್ಟು 28 ಎಕರೆ 16 ಗುಂಟೆ (02 ಗುಂಟೆ 'ಎ' ಖರಾಬು ಸೇರಿ ಮತ್ತು 07 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ)** ವಿಸ್ತೀರ್ಣದ ಜಮೀನುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2015 ರ ಕಲಂ 17(2ಎ) ರನ್ವಯ ವಿನ್ಯಾಸ ನಕ್ಷೆಯನ್ನು ಭೌತಿಕವಾಗಿ ಜಮೀನುಗಳ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸಲು ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, **"ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ"** ನೀಡಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ನೋಂದಣಿ ಮಾಡಿಕೊಂಡ ನಂತರವೇ ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯ ನಿರ್ಮಾಣದ ವ್ಯವಹಾರದ ಕುರಿತು ಜಾಹೀರಾತು ನೀಡಬಹುದು ಹಾಗೂ ನಿವೇಶನ ಮಾರಾಟ ಸಂಬಂಧ ಮುಂಗಡ ಒಪ್ಪಂದ ಕರಾರನ್ನು ಮಾಡಿಕೊಳ್ಳಬಹುದು.
3. ಈ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಯಾವುದೇ ನಿವೇಶನಗಳನ್ನು ಬಿಡುಗಡೆ ಮಾಡಿರುವುದಿಲ್ಲ.
4. ಪ್ರಸ್ತಾಪಿತ ತಾತ್ಕಾಲಿಕ ವಸತಿ ವಿನ್ಯಾಸವನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇಲ್ಲಿ ನೋಂದಾಯಿಸಿಕೊಂಡು, ತದನಂತರ ವಿನ್ಯಾಸದ ಮಾಲೀಕರು ಇಚ್ಛಿಸಿದಲ್ಲಿ ಸದರಿ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿನ ಮೂಲೆ ನಿವೇಶನಗಳನ್ನು ಈ ಪ್ರಾಧಿಕಾರಕ್ಕೆ ಅಡಮಾನ ಪತ್ರದ ಮೂಲಕ ನೋಂದಾಯಿಸಿ ಉಳಿಕೆ ನಿವೇಶನಗಳಲ್ಲಿನ ಪೈಕಿ ಅಂದರೆ ಒಟ್ಟಾರೆ ನಿವೇಶನಗಳ ಪೈಕಿ ಶೇ 40 ರಷ್ಟು ನಿವೇಶನಗಳನ್ನು ಮೊದಲನೇ ಹಂತದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(1)(2-ಸಿ) ರನ್ವಯ ಬಿಡುಗಡೆಗೊಳಿಸಿಕೊಳ್ಳ ಬಹುದಾಗಿರುತ್ತದೆ.
5. **ಸದರಿ ಜಮೀನಿನಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳುವ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ Consent Order No: CTE-331523 PCB ID 119575, ದಿನಾಂಕ: 02.08.2022 ಮತ್ತು Consent Order No: CTE-335315 PCB ID 119575, ದಿನಾಂಕ: 03.01.2023 ರನ್ವಯ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.**
6. ತಾತ್ಕಾಲಿಕವಾಗಿ ಅನುಮೋದನೆಯಾದ ವಸತಿ ವಿನ್ಯಾಸದಲ್ಲಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಅಂದರೆ ಪ್ರತಿ ನಿವೇಶನಕ್ಕೂ ನೀರು ಸರಬರಾಜಿನ ಪೈಪ್‌ಲೈನ್, ವಿದ್ಯುತ್ ಸಂಪರ್ಕ, ರಸ್ತೆಯ ಎರಡೂ ಬದಿಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ತೆರೆದ ಚರಂಡಿಗಳನ್ನು (Open Box Drain) ನಿರ್ಮಿಸತಕ್ಕದ್ದು, ಯುಜಿಡಿ, ನೀರಿನ ಓವರ್ ಹೆಡ್ ಟ್ಯಾಂಕ್ (ಓಹೆಚ್‌ಟಿ), ಎಸ್.ಟಿಪಿ. / Soak Pit, ರಸ್ತೆ ಡಾಂಬರೀಕರಣ, ಉದ್ಯಾವನ ಮತ್ತು ಬಯಲು ಜಾಗಗಳಿಗೆ ಚೈನ್ ಲಿಂಕ್ ಫೆನ್ಸಿಂಗ್, ಸಿ.ಎ ನಿವೇಶನಕ್ಕೆ ಚೈನ್ ಲಿಂಕ್ ಫೆನ್ಸಿಂಗ್ ಹಾಗೂ ಇತರೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹಾಗೂ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರ / ಸ್ಥಳೀಯ ಸಂಸ್ಥೆ / ಮಂಡಳಿ / ಇಲಾಖೆ ಗಳಿಂದ ಪಡೆಯಲಾದ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ಶೇ. 100 ರಷ್ಟು ಅಥವಾ 2ನೇ ಹಂತದ ಶೇ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದು. ಅಲ್ಲಿಯವರೆಗೆ ವಿನ್ಯಾಸದಲ್ಲಿನ ಬಿಡುಗಡೆಗೊಳಿಸದ ಯಾವುದೇ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ.
7. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಟ ಬಳಕೆಗೆ ಮಾತ್ರ ಅಭಿವೃದ್ಧಿ ಪಡಿಸತಕ್ಕದ್ದು. ಬದಲಾವಣೆ ಪ್ರಸ್ತಾಪಿಸಿದಲ್ಲಿ ಚಾಲ್ತಿಯಲ್ಲಿರುವ ಶುಲ್ಕ ಹಾಗೂ ನಿಯಮಗಳು ಅನ್ವಯವಾಗುತ್ತವೆ.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

**ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./34/2021-22** **ದಿನಾಂಕ: 16.03.2023**

8. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡ-ಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಇಕ್ಕೆಲಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
9. ಅನುಮೋದಿತ ವಿನ್ಯಾಸದಲ್ಲಿ ಮಳೆ ನೀರು ಕೊಯ್ಲಿಗಾಗಿ ಮತ್ತು ಅಂತರ್ ಜಲವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
10. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
11. ಈ ಅನುಮೋದನೆಯನ್ನು ಕೆಟಿಸಿಪಿ ತಿದ್ದುಪಡಿ ಕಾಯ್ದೆ, 2015 ರ ಕಲಂ 17(2ಎ) ರಡಿಯಲ್ಲಿ ನೀಡಿರುವುದರಿಂದ, ಈ ಅನುಮೋದನೆಯನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಂಬಂಧ ಉಪಯೋಗಿಸಲು ಬರುವುದಿಲ್ಲ.
12. ತಾಲ್ಲೂಕು ಭೂಮಾಪಕರು ತಯಾರಿಸಲಾದ ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಗೆ ಅನುಗುಣವಾಗಿ ಆಕಾರ ಹಾಗೂ ವಿಸ್ತೀರ್ಣಕ್ಕೆ ಅನುಗುಣವಾಗಿ ಈ ವಸತಿ ವಿನ್ಯಾಸವನ್ನು ತಯಾರಿಸಿ ಅನುಮೋದಿಸಲಾಗಿದೆ.
13. **ಪ್ರಸ್ತಾಪಿತ ವಸತಿ ವಿನ್ಯಾಸದ ಪ್ರದೇಶದ ಜಮೀನಿನಲ್ಲಿ ನಿರ್ಮಿಸಲಾಗುವ ಮಳೆ ನೀರು ಚರಂಡಿಗಳನ್ನು ಮುಚ್ಚದಂತೆ ಮುಕ್ತವಾಗಿಟ್ಟು ನಿರ್ಮಾಣ ಮಾಡತಕ್ಕದ್ದು. ಕೊಳಚೆ ನೀರನ್ನು ಮಳೆ ನೀರುಚರಂಡಿಗೆ ಬಿಡದಂತೆ ಕ್ರಮ ವಹಿಸತಕ್ಕದ್ದು.**
14. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆಯು ಇಲ್ಲದೇ ತಂತಾನೇ ರದ್ದುಗೊಳ್ಳುತ್ತದೆ.
15. ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಪ್ರಾಧಿಕಾರವು ಅನುಮೋದಿಸಿರುವ ತಾತ್ಕಾಲಿಕ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.
16. ಸರ್ಕಾರಿ ಖರಾಬು ಇದ್ದಲ್ಲಿ, ಸದರಿ ಪ್ರದೇಶವನ್ನು ಒತ್ತುವರಿ ಮಾಡದೆ ಹಾಗೇ ಮೀಸಲಿರಿಸಿ ಸಂರಕ್ಷಿಸತಕ್ಕದ್ದು ಹಾಗೂ ಸ್ಥಳೀಯ ಸಂಸ್ಥೆಗಳು ವಿಧಿಸುವ ಷರತ್ತುಗಳನ್ನು ಪಾಲಿಸತಕ್ಕದ್ದು.
17. ರಾಜಕಾಲುವೆಯನ್ನು ಮುಚ್ಚದಂತೆ ಮತ್ತು ರಾಜ ಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.
18. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ / ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಮತ್ತು ರಾಜ ಕಾಲುವೆಗಳು ಹೂಳು ತುಂಬದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.
19. **ಸದರಿ ಬಡಾವಣೆಯಲ್ಲಿನ ಒಳಚರಂಡಿ ಹಾಗೂ ನೀರು ಸರಬರಾಜು ಕಾಮಗಾರಿಗಳನ್ನು ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ / ಕೆ.ಯು.ಎಸ್.ಡಬ್ಲ್ಯೂ. ಇವರ ಸಹಮತದೊಂದಿಗೆ ಅಭಿವೃದ್ಧಿ ಪಡಿಸಿ ನಂತರ ಸದರಿ ಇಲಾಖೆಯಿಂದ ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.**
20. ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಸ್ಥಳೀಯ ಸಂಸ್ಥೆ ಕಾಯ್ದೆಯಡಿ **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು** ಇವರ ವತಿಯಿಂದ ಪರವಾನಗಿ ಪಡೆಯತಕ್ಕದ್ದು.

21. **ಈ ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ನೀಡಿರುವ ರೆವಿನ್ಯೂ ದಾಖಲೆಗಳನ್ನು ಆಧರಿಸಿ ತಯಾರಿಸಲಾಗಿದೆ. ಈ ಜಮೀನಿನ ಮಾಲೀಕತ್ವ ಮತ್ತು ಜಮೀನುಗಳ ಗಡಿಗಳಿಗೆ ಸಂಬಂಧಪಟ್ಟಂತೆ ಮತ್ತು ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.**

22. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೆ ಕೂಡಲೇ ರದ್ದಾಗುವುದು ಹಾಗೂ ಕೆಟಿಸಿಪಿ ಕಾಯ್ದೆ, 1961 ರ ಕಲಂ 17(4) ಮತ್ತು 76(ಓ) ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಸಹಿ/-

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

**ಪ್ರತಿಗಳನ್ನು:**

1. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2ನೇ ಮಹಡಿ, ಸಿಲ್ವರ್ ಜ್ಯುಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಬೆಂಗಳೂರು-27 ಇವರಿಗೆ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಒಂದು ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಸಲ್ಲಿಸಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ಇವರಿಗೆ ವಿನ್ಯಾಸದ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮೆ|| ಜೆ.ಆರ್. ಹೌಸಿಂಗ್ ಡೆವಲಪರ್ಸ್ (ಪ್ರೈ) ಲಿ., ನಂ. 71, 2ನೇ ಮಹಡಿ, 2ನೇ ಅಡ್ಡ ರಸ್ತೆ, ಆರ್.ಜೆ. ಗಾರ್ಡನ್, ಔಟರ್ ರಿಂಗ್ ರಸ್ತೆ, ಮಾರತಹಳ್ಳಿ, ಬೆಂಗಳೂರು-560 037 ಇವರಿಗೆ ಮಾಹಿತಿಗಾಗಿ ವಿನ್ಯಾಸ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.
4. ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ,
ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.